# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್ ಬಿ.ಸಿ.ಡಿ–2354/2014/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು,
ದಿನಾಂಕ: 29/01/2020.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಅರಕೆರೆ ವಾರ್ಡ್ ನಂ. 193 ರ ವ್ಯಾಪ್ತಿಯಲ್ಲಿ ನಿಯಮಬಾಹಿರವಾಗಿ "ಬಿ" ಖಾತೆ ನಿವೇಶನಗಳಲ್ಲಿ ಕಟ್ಟಡಗಳನ್ನು ಅಕ್ರಮವಾಗಿ ನಿರ್ಮಿಸಿದ್ದು ಸದರಿ ಕಟ್ಟಡದ ಮಾಲೀಕರ ವಿರುದ್ಧ ನ್ಯಾಯೋಚಿತವಾಗಿ ಸಂಬಂಧಪಟ್ಟವರಿಗೆ ಅವಕಾಶ ಕಲ್ಪಿಸಿ ನಿಯಮಾನುಸಾರ ಕ್ರಮ ಜರುಗಿಸಿ ಜರುಗಿಸಿದ ಕ್ರಮದ ಬಗ್ಗೆ ವರದಿ ಸಲ್ಲಿಸುವ ಕುರಿತು.

*****

1. ಎದುರುದಾರರಾದ (1) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರರು, ವಾರ್ಡ್ ನಂ. 193, ಅರಕೆರೆ ಉಪ ವಿಭಾಗ, ಬಿ.ಬಿ.ಎಂ.ಪಿ., ಬೆಂಗಳೂರು, (2) ಸಹಾಯಕ ಅಭಿಯಂತರರು, ವಾರ್ಡ್ ನಂ. 193, ಅರಕೆರೆ ಉಪ ವಿಭಾಗ, ಬಿ.ಬಿ.ಎಂ.ಪಿ., ಬೆಂಗಳೂರು ರವರ ವಿರುದ್ಧ ಸ್ವ ದೂರು ದಾಖಲಿಸಲು ಗೌರವಾನ್ವಿತ ಉಪಲೋಕಾಯುಕ್ತರು ಆದೇಶಿಸಿ ಎದುರುದಾರರ ವಿರುದ್ಧ ತನಿಖೆ ಮಾಡಲು ನಿರ್ದೇಶಿಸಿರುತ್ತಾರೆ.

2. ದೂರಿನ ಸಾರಾಂಶ:

ಅರಕೆರೆ ವಾರ್ಡ್ ನಂ. 193 ರ ವ್ಯಾಪ್ತಿಗೆ ಬರುವ 'ಬಿ' ಖಾತೆ ನಿವೇಶನದಲ್ಲಿ ನಿಯಮ ಬಾಹಿರವಾಗಿ, ನಕ್ಷೆ ಉಲ್ಲಂಘನೆ ಮಾಡಿ ಮನೆ ನಿರ್ಮಿಸುತ್ತಿದ್ದು ಅಧಿಕಾರಿಗಳು ಯಾವುದೇ ಕ್ರಮ ಜರುಗಿಸಿಲ್ಲ.

(1) ನಿವೇಶನ ಸಂ: 117–80' ರಸ್ತೆ ಬಿಟಿಎಂ 6 ಹಂತ ಬೆಂಗಳೂರು

(2) ನಿವೇಶನ ಸಂ: 118–80' ರಸ್ತೆ ಬಿಟಿಎಂ 6 ಹಂತ ಬೆಂಗಳೂರು

(3) ನಿವೇಶನ ಸಂ: 1, 2, 3, 2ನೇ ಮುಖ್ಯ ರಸ್ತೆ ಸರಸ್ವತಿ ಪುರಂ ಬೆಂಗಳೂರು

(4) ಮಂಜುನಾಥ ವೈನ್ ಸ್ಟೋರ್ಸ್ ಪಕ್ಕದ ಕಟ್ಟಡ

(5) 1ನೇ ಅಡ್ಡರಸ್ತೆ ಸರಸ್ವತಿಪುರ ಸೈಟ್ ನಂ. 126/31 ರ ಎದುರು

(6) ಮೈಕ್ರೊ ಕಂ. ಎದುರು ಬಿಟಿಎಂ 6ನೇ ಹಂತ

(7) ಸೈಟ್ ನಂ. 59 & 60, 4ನೇ ಅಡ್ಡ ರಸ್ತೆ ಸರಸ್ವತಿಪುರಂ ನಲ್ಲಿರುವ ಕಟ್ಟಡ ನಿರ್ಮಾಣ

(8) ಅಪಾರ್ಟ್‌ಮೆಂಟ್ ಕಟ್ಟಡ 5ನೇ ಅಡ್ಡರಸ್ತೆ

(9) ಆರ್.ಆರ್. ಲೇಔಟ್ ಹಿಂದೆ ಕಟ್ಟಡ ನಿರ್ಮಾಣ

(10) ಪ್ರಿ–ಸ್ಕೂಲ್ ಹಿಂದೆ ಸರಸ್ವತಿಪುರಂ ಕಟ್ಟಡ ನಿರ್ಮಾಣ

(11)ನಿವೇಶನ ಸಂ: 52, 3ನೇ ಅಡ್ಡರಸ್ತೆ ಸರಸ್ವತಿಪುರಂ ಕಟ್ಟಡ ನಿರ್ಮಾಣ

(12) ಮಾನ್ಯ ಅರೇನಾ ಅಪಾರ್ಟ್‌ಮೆಂಟ್ಸ್, ಬೆಂಗಳೂರು

(13) 4ನೇ ಅಡ್ಡರಸ್ತೆ ನ್ಯಾಯಪ್ಪನಹಳ್ಳಿ ಬಿ ಖಾತೆಯಲ್ಲಿ ಕಟ್ಟಡ ನಿರ್ಮಾಣ

(14) ಮನೆಯ ಕಟ್ಟಡ ಧನುಷ್ ಕ್ಲಾಸಿಕ್ ಅಪಾರ್ಟ್‌ಮೆಂಟ್ ಎದುರು

(15) ಭಾಗ್ಯಲಕ್ಷ್ಮೀ ಅಪಾರ್ಟ್‌ಮೆಂಟ್

ಸದರಿ ಕಟ್ಟಡ ಮಾಲೀಕರ ವಿರುದ್ಧ ಕ್ರಮ ಜರುಗಿಸುವ ಅಧಿಕಾರಿಗಳಾದ

(1) ಶ್ರೀ ಜನ್ನಪ್ಪ,
ಜಂಟಿ ಆಯುಕ್ತರು.

(2) ಶ್ರೀ ಶ್ರೀನಿವಾಸ ಮೂರ್ತಿ,
ಕಾರ್ಯಪಾಲಕ ಅಭಿಯಂತರರು

(3) ಶ್ರೀ ಬಿ.ಸಿ. ನಾರಾಯಣ,
ಸಹಾಯಕ ಕಾರ್ಯಪಾಲಕ ಅಭಿಯಂತರರು

(4) ಶ್ರೀ ಲಿಂಗರಾಜೇಗೌಡ,
ಕಿರಿಯ ಅಭಿಯಂತರರು.

ಇವರು ಮಾಲೀಕರಿಂದ ಲಕ್ಷಾಂತರ ಹಣ ವಸೂಲಿ ಮಾಡಿರುತ್ತಾರೆ. ಅಕ್ರಮ ನಿರ್ಮಾಣದಿಂದ ಪಾಲಿಕೆಗೆ ನಷ್ಟ ಉಂಟಾಗಿರುತ್ತದೆ. ಕಾರಣ ಸದರಿಯವರ ವಿರುದ್ಧ ಕ್ರಮ ಜರುಗಿಸಲು ವಿನಂತಿಸಿ ವಿ. ವೆಂಕಟೇಶ್, ಆರ್.ಟಿ.ಐ. ಕಾರ್ಯಕರ್ತರು, ದೂರು ಸಲ್ಲಿಸಿರುತ್ತಾರೆ.

3. ಪ್ರಸ್ತುತ ದೂರನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಸಹಾಯಕ ಅಭಿಯಂತರರ ವಿರುದ್ಧ ದಾಖಲಿಸಿ ತನಿಖೆ ಕೈಗೊಳ್ಳಲಾಗಿರುತ್ತದೆ.

4. ಸಹಾಯಕ ಕಾರ್ಯಪಾಲಕ ಅಭಿಯಂತರರ ವರದಿ ದಿನಾಂಕ: 27/10/2014:-

ಬಿ.ಬಿ.ಎಂ.ಪಿ. ಬೊಮ್ಮನಹಳ್ಳಿ ವಲಯವು ಹೊಸದಾಗಿ ಅಸ್ತಿತ್ವಕ್ಕೆ ಬಂದಿದ್ದು, ಈ ಪ್ರದೇಶವು ಹಳ್ಳಿಗಳಿಂದ ಕೂಡಿದ್ದು ಬಿ.ಬಿ.ಎಂ.ಪಿ. ಯಲ್ಲಿ ಖಾತೆ ಪಡೆಯಲಾಗದೆ ಅಂದಿನ ಸಿ.ಎಂ.ಸಿ. ಬೊಮ್ಮನಹಳ್ಳಿ ಕಾಲದಲ್ಲಿ ಖಾತೆ ಪಡೆದಿದ್ದು ಅಧಿಕೃತವಾಗಿ ಬಿ.ಬಿ.ಎಂ.ಪಿ. ಯಲ್ಲಿ ಎ. ಖಾತ ಪಡೆಯಲು ಸಾಧ್ಯವಿಲ್ಲದ ಪ್ರಕರಣಗಳು ವಾರ್ಡ್ ನಂ. 193 ರಲ್ಲಿ ಕಂಡುಬಂದಿರುತ್ತದೆ. ಹಾಗೂ ಸಾರ್ವಜನಿಕರು ವಾಸಕ್ಕೆ ಮನೆಗಳಿಲ್ಲದೆ ಹಾಲಿ ಇರುವ

ನಿವೇಶನಗಳಲ್ಲಿ ನಕ್ಷೆ ಮಂಜೂರಾತಿ ಪಡೆಯಲು ಅವಕಾಶವಿಲ್ಲದ ಕಾರಣ ಮನೆಗಳನ್ನು ನಿರ್ಮಿಸಿಕೊಳ್ಳುತ್ತಿರುವುದು ಸರ್ವೆ ಸಾಮಾನ್ಯವಾಗಿರುತ್ತದೆ. ವಿಚಾರಿಸಲಾಗಿ ಸರ್ಕಾರದ ಅಕ್ರಮ ಸಕ್ರಮ ಯೋಜನೆ ಮಂಜೂರಾದ ನಂತರ ವಿಧಿಸಬಹುದಾದ ದಂಡವನ್ನು ಕಟ್ಟಲು ತಯಾರಾಗಿದ್ದು ಕಟ್ಟಡಗಳನ್ನು ಸಕ್ರಮಗೊಳಿಸಿಕೊಳ್ಳುವುದಾಗಿ ವಿವರಿಸಿರುತ್ತಾರೆ. ಕಟ್ಟಡಗಳ ಬಗ್ಗೆ ಕೂಲಂಕುಶವಾಗಿ ಪರಿಶೀಲಿಸಿ ಕೆ.ಎಂ.ಸಿ. ಕಾಯೆ ಅನ್ವಯ ಸೂಕ್ತ ಕ್ರಮವಹಿಸಲು ಸಮಯ ಕೋರಿರುತ್ತಾರೆ.

5. ಸಹಾಯಕ ಕಾರ್ಯಪಾಲಕ ಅಭಿಯಂತರರ ವರದಿ ದಿನಾಂಕ: 11/10/2017:-

ಬಿ.ಬಿ.ಎಂ.ಪಿ. ಬೊಮ್ಮನಹಳ್ಳಿ ವಲಯ 2007 ರಲ್ಲಿ ಅಸ್ತಿತ್ವಕ್ಕೆ ಬಂದಿರುವುದರಿಂದ ಸದರಿ ಪ್ರದೇಶವು ಹಳ್ಳಿಗಳಿಂದ ಕೂಡಿದ್ದು, ಹಿಂದಿನ ಬೊಮ್ಮನಹಳ್ಳಿ ಸಿ.ಎಂ.ಸಿ ಕಾಲದಲ್ಲಿ ದಾಖಲಾಗಿರುವ ಖಾತೆಗಳನ್ನು ಯಥಾವತ್ತಾಗಿ ಬಿ.ಬಿ.ಎಂ.ಪಿ.ಗೆ ವರ್ಗಾಯಿಸಿ ಕೊಂಡಿರುವುದು ಕಂದಾಯ ಇಲಾಖೆಯಿಂದ ತಿಳಿದು ಬಂದಿರುತ್ತದೆ. ಸದರಿ ಬೊಮ್ಮನಹಳ್ಳಿ ವಲಯದಲ್ಲಿ ಸಾರ್ವಜನಿಕರು ಪ್ರಸ್ತುತ ನಿವೇಶನಗಳನ್ನು ನಕ್ಷೆ ಮಂಜೂರಾತಿ ಪಡೆಯಲು ಅವಕಾಶವಿಲ್ಲದೆ ಮನೆಗಳನ್ನು ನಿರ್ಮಿಸುತ್ತಿರುವುದನ್ನು ಕಂಡು ಬಂದಿರುತ್ತದೆ. ಕೆಂ.ಎಂ.ಸಿ. ಕಾಯ್ದೆಯಡಿ ನಿಯಮಾನುಸಾರ ಕ್ರಮ ಜರುಗಿಸಲು ಕಾಲಾವಕಾಶ ಕೋರಿರುತ್ತಾರೆ.

6. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಿಗೆ ಅನೇಕ ಪತ್ರಗಳನ್ನು ಬರೆದು ಕಟ್ಟಡದ ಮಾಲೀಕರ ವಿರುದ್ಧ ಕೆ.ಎಂ.ಸಿ. ಕಾಯಿದೆ ಅಡಿ ಕೈಗೊಂಡ ಕ್ರಮದ ಬಗ್ಗೆ ವರದಿ ಸಲ್ಲಿಸಲು ಸೂಚಿಸಿ ಅನೇಕ ಪತ್ರಗಳನ್ನು ಕಳುಹಿಸಲಾಗಿದೆ. ಈವರೆಗೆ ಕೈಗೊಂಡ ಕ್ರಮದ ಬಗ್ಗೆ ವರದಿ ಸ್ವೀಕೃತವಾಗಿರುವುದಿಲ್ಲ.

7. ಮೇಲೆ ನಮೂದಿಸಿದ ಕಾರಣಗಳಿಂದ ಮತ್ತು ಕಡತದಲ್ಲಿನ ಆಧಾರಗಳಿಂದ, ಅರಕೆರೆ ವಾರ್ಡ್ ನಂ. 193 ರ ವ್ಯಾಪ್ತಿಯಲ್ಲಿ ನಿಯಮಬಾಹಿರವಾಗಿ "ಬಿ" ಖಾತೆ ನಿವೇಶನಗಳಲ್ಲಿ ಕಟ್ಟಡಗಳನ್ನು ಅಕ್ರಮವಾಗಿ ನಿರ್ಮಿಸಿದ್ದು ಸದರಿ ಕಟ್ಟಡದ ಮಾಲೀಕರ ವಿರುದ್ಧ ನ್ಯಾಯೋಚಿತವಾಗಿ ಸಂಬಂಧಪಟ್ಟವರಿಗೆ ಅವಕಾಶ ಕಲ್ಪಿಸಿ ನಿಯಮಾನುಸಾರ ಕ್ರಮ ಜರುಗಿಸಿ ಜರುಗಿಸಿದ ಕ್ರಮದ ಬಗ್ಗೆ ವರದಿ ಸಲ್ಲಿಸುವಂತೆ ಸೂಚಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

8. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ **ಒಂದು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anand
29/1

**[ನ್ಯಾಯಮೂರ್ತಿ ಎನ್ ಆನಂದ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**